# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ರವರ ಕಛೇರಿ

(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು-570 017
www.cescmysore.org

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಬೇಲೂರು.
ದೂ.ಸಂ. 08177-222223
E.Mail : aeehsnbelur@rediffmail.com


---

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಬೇ/2018-19/F-16/ 3449,50 ದಿನಾಂಕ : 05/12/18

## ಜನಸಂಪರ್ಕ ಸಭೆಯ ನಡಾವಳಿಗಳು

ದಿನಾಂಕ : 28.11.18 ರಂದು ಅಧೀಕ್ಷಕ ಇಂಜಿನಿಯರ್(ವಿ) ಹಾಸನ ರವರ ಪರವಾಗಿ ಸಭೆಗೆ ಆಗಮಿಸಿದ್ದ ಶ್ರೀಮತಿ ಭಾರತಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಹಾಸನ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡಾವಳಿಗಳು;

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ;**

1. ಶ್ರೀಯುತ ಜಗದೀಶ, ಕಾ.ಇಂ(ವಿ), ಸಕಲೇಶಪುರ ವಿಭಾಗ.
2. ಶ್ರೀ ಸದಾಶಿವ ಲೆಕ್ಕಾಧಿಕಾರಿ(ಅಂ.ಪ), ಸಕಲೇಶಪುರ ವಿಭಾಗ.
3. ಶ್ರೀಮತಿ ಕವಿತಾ, ಹೆಚ್.ಆರ್. ಸ.ಕಾ.ಇಂ(ವಿ), ಬೇಲೂರು ಉಪವಿಭಾಗ.
4. ಶ್ರೀ ನಿಕೇಶಕುಮಾರ್ ಸಿ.ಎನ್. ಸಹಾಯಕ ಇಂಜಿನಿಯರ್(ತಾಂ) ಬೇಲೂರು ಉಪವಿಭಾಗ.
5. ಶ್ರೀ ಎನ್.ಡಿ. ಕುಮಾರ್, ಸ.ಇಂ(ವಿ), ಬೇಲೂರು ಶಾಖೆ.
6. ಶ್ರೀ ಯೋಗೇಶ್, ಕಿ.ಇಂ(ವಿ), ಹಗರೆ ಶಾಖೆ.
7. ಶ್ರೀ ಡಿ. ಸಂತೋಷ್ ಕುಮಾರ್, ಕಿ.ಇಂ(ವಿ), ಹಳೆಬೀಡುಶಾಖೆ.
8. ಶ್ರೀ ಜಿ. ಶಶಿಕಿರಣ್, ಕಿ.ಇಂ(ವಿ), ತೊಳಲು ಶಾಖೆ.
9. ಶ್ರೀ ರಾಘವೇಂದ್ರ (ಪ್ರಭಾರ) ಕಿ.ಇಂ(ವಿ), ಅರೇಹಳ್ಳಿ ಶಾಖೆ.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು 3:00 ಗಂಟೆಗೆ ಪ್ರಾರಂಭ ಮಾಡಿದರು.**

---

**ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.**

1. ಜಯಲಿಂಗಪ್ಪ ಬಿನ್ ಕಲ್ಲೇಗೌಡ, ಮುತ್ತುಗನ್ನೆ ಗ್ರಾಮದ ಹೊರಗಡೆ ಇರುವ ಕೆಲವು ಮನೆಗಳಿಗೆ 11 ಐ.ಪಿ ಫೀಡರ್‌ನಿಂದ ವಿದ್ಯುತ್ ಸಂಪರ್ಕವಿದ್ದು ನಿರಂತರ ಜ್ಯೋತಿ ಫೀಡರ್ ನಿಂದ ಸಂಪರ್ಕವನ್ನು ನೀಡಬೇಕಾಗಿ ಕೋರಿರುತ್ತಾರೆ.

   ಇದಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಊರಿನ ಹೊರಗಡೆ ಇರುವ ಮನೆಗಳಿಗೆ ನಿರಂತರ ಜ್ಯೋತಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ನಿಗಮದ ವತಿಯಿಂದ ಅಂದಾಜು ಪಟ್ಟಿಯನ್ನು ತಯಾರಿಸಿ ಕಾಮಗಾರಿಯನ್ನು ನಿರ್ವಹಿಸಿ. ತದ ನಂತರ ಸದರಿ ಅಂದಾಜು ಪಟ್ಟಿಯ ಮೊತ್ತದಲ್ಲಿ ಶೇ. 10 ರಷ್ಟು ಹಣವನ್ನು ಪ್ರತಿ ಮಾಹೆಯಾನ ನೀಡುವ ಬಿಲ್ಲಿನಲ್ಲಿ ಸೇರಿಸುವುದರ ಬಗ್ಗೆ ನಿಗಮ ಕಛೇರಿಯಿಂದ ಅನುಮೋದನೆಯನ್ನು ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಮತ್ತು ಹಣವನ್ನು ಪಾವತಿಸಲು ಒಪ್ಪಿಗೆ ಪತ್ರವನ್ನು ತೆಗೆದುಕೊಂಡು ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ತಯಾರಿಸುವಂತೆ ಬೇಲೂರು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು.

2. ಚನ್ನಾಪುರ ಮತ್ತು ಹನಿಕೆ ಗ್ರಾಮಸ್ಥರು ಹನಿಕೆ ಫೀಡರ್ ಮಾರ್ಗಗಳಲ್ಲಿ ಆಗಿಂದಾಗ್ಗೆ ವಿದ್ಯುತ್ ಅಡಚಣೆಯಾಗುತ್ತಿದ್ದು ಹಾಗೂ ಬಿ. ಎನ್. ಮಲ್ಲೇಶ್, ಹೊನ್ನೇನಹಳ್ಳಿ ಕಾವಲು ರವರು ಸ್ಟೋನ್ ಕ್ರಷರ್ ಗೆ ಹೆಚ್.ಟಿ ಸಂಪರ್ಕವನ್ನು ಹಲ್ಮಿಡಿ NJY ಫೀಡರ್‌ನಿಂದ ನೀಡಿದ್ದು, ಈ ಮಾರ್ಗದಲ್ಲಿ ಆಗಿಂದಾಗ್ಗೆ ವಿದ್ಯುತ್ ಅಡಚಣೆಯಾಗುತ್ತಿದ್ದು ತುಂಬಾ ತೊಂದರೆಯಾಗುತ್ತಿರುತ್ತದೆ ಎಂದು ದೂರಿದರು.

ಇದಕ್ಕೆ ಸಂಬಂಧಿಸಿದಂತೆ, ಬೇಲೂರು ಶಾಖಾಧಿಕಾರಿಗಳು ಈ ಹಿಂದೆ ಹೆಬ್ಬಾಳು ಐಪಿ ಹಾಗೂ ಹನಿಕೆ ಐಪಿ ಎರಡು ಫೀಡರ್ ಗಳನ್ನು ಸೇರಿಸಿ ಒಂದು ಹಲ್ಮಿಡಿ NJY ಫೀಡರ್‌ನ್ನು ಮಾಡಿರುವುದರಿಂದ, ಈ ಫೀಡರ್ ತುಂಬಾ ಉದ್ದವಾದ ಮಾರ್ಗವಾಗಿರುವುದರಿಂದ ಹೆಚ್ಚು ಲೈನ್‌ಟ್ರಬಲ್ ಆಗುತ್ತಿರುತ್ತದೆ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷರು ಇದಕ್ಕೆ ಸಂಬಂಧಿಸಿದಂತೆ ವಿದ್ಯುತ್ ಅಡಚಣೆ ನಿವಾರಿಸಲು ಲಿಂಕ್ ಲೈನ್ ಅಂದಾಜು ಪಟ್ಟಿಯನ್ನು ತಯಾರಿಸಿಕೊಡುವಂತೆ ಬೇಲೂರು ಶಾಖಾಧಿಕಾರಿಗಳಿಗೆ ಸೂಚಿಸಿದರು.

3. ಪುರುಷೋತ್ತಮ, ಯಮಸಂಧಿ ರವರು ಯಮಸಂಧಿ ಗ್ರಾಮದಲ್ಲಿ ಕಂಬಗಳು ಬಾಗಿರುತ್ತದೆ ಮತ್ತು ವೈರ್ ಗಳು ಕೆಳಮಟ್ಟದಲ್ಲಿ ಇರುತ್ತದೆ ಎಂದು ತಿಳಿಸಿದರು.

ಇದಕ್ಕೆ ಸಂಬಂಧಪಟ್ಟಂತೆ ತೊಳಲು ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿ ಸರಿಪಡಿಸಲಾಗುವುದು ಎಂದು ತಿಳಿಸಿದರು.

4. ಚಂದ್ರಶೇಖರ, ಸಿದ್ದರಹಳ್ಳಿ ರವರು ತಮ್ಮ ತೋಟದ ಹತ್ತಿರ ಇರುವ ಕಂಬದ ಮಾರ್ಗವನ್ನು 1.5 ಅಡಿಯಷ್ಟು ನಿಗಮದ ವತಿಯಿಂದ ಸ್ಥಳಾಂತರ ಮಾಡಿಸಿಕೊಡಬೇಕಾಗಿ ಕೋರಿದರು.

ಇದಕ್ಕೆ ಸಂಬಂಧಿಸಿದಂತೆ, ಸಭೆಯ ಅಧ್ಯಕ್ಷರು ಆ ಭಾಗದಲ್ಲಿ ಸಿದ್ದರಹಳ್ಳಿ UNIP ಕಾಮಗಾರಿಯನ್ನು ನಿರ್ವಹಿಸಬೇಕಾದರೆ ಈ ಕೆಲಸವನ್ನು ಮಾಡಿಕೊಡಬೇಕಾಗಿ ತೊಳಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಅಭಿನಂದಿಸುವ ಮೂಲಕ ಸಭೆಯನ್ನು ಸಂಜೆ 5:30 ಗಂಟೆಗೆ ಮುಕ್ತಾಯ ಮಾಡಿದರು.**

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಬೇಲೂರು.

*__ಯಥಾ ಪ್ರತಿಯನ್ನು :__*

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಸೆಸ್ಕ್, ಹಾಸನ ರವರ ಅದ್ಯ ಗಮನಕ್ಕೆ ಸಲ್ಲಿಸಲಾಗಿದೆ.
2. ಕಾರ್ಯಪಾಲಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಸೆಸ್ಕ್, ಸಕಲೇಶಪುರ ರವರ ಅದ್ಯ ಗಮನಕ್ಕೆ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ.